ತಾಲ್ಲೂಕುವಾರು ವಿವರ ಈ ಕೆಳಗಿನಂತಿದೆ.

	ತಾಲ್ಲೂಕು	ವಿಸ್ತೀರ್ಣ (ಎಕರೆಗಳಲ್ಲಿ)
1)	ಬಿಜಾಪುರ	189.27
2)	ಬಸವನಬಾಗೇವಾಡಿ	171.11
3)	ಮುದ್ದೇಬಿಹಾಳ	59.54
4)	ಇಂಡಿ	889.55
5)	ಸಿಂದಗಿ	87.32
6)	ಬಾಗಲಕೋಟೆ	73.56
7)	ಬಾದಾಮಿ	10.00
8)	ಹುನಗುಂದ	231.26
9)	ಜಮಖಂಡಿ	12.27
10)	ಮುಧೋಳ	90.07
11)	ಬೀಳಗಿ	16.13
	ಒಟ್ಟು	1952.36

ಆ, ಇ) ಹಣದ ಲಭ್ಯತೆ ಹಾಗೂ ಘಟಕ ವೆಚ್ಚದ ಮಿತಿಯೊಳಗೆ ಜಮೀನಿನ ಲಭ್ಯತೆಗೆ ಒಳಪಟ್ಟು ಭೂಒಡೆತನ ಯೋಜನೆಯಡಿ ಜಮೀನನ್ನು ಖರೀದಿಸಲಾಗುತ್ತಿದೆ.

ಗುಳೇದಗುಡ್ಡ ಮತಕ್ಷೇತ್ರದಲ್ಲಿ ವೈಯಕ್ತಿಕ (ಗಂಗಾಕಲ್ಯಾಣ) ಕೊಳವೆ ಬಾವಿ ಯೋಜನೆ.

95(363) ಶ್ರೀ ರಾಜಶೇಖರ ಶೀಲವಂತ ವೀರಣ್ಣ (ಗುಳೇದಗುಡ್ಡ) :— ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಳೇದಗುಡ್ಡ ಮತಕ್ಷೇತ್ರದಲ್ಲಿ ಪರಿಶಿಷ್ಟ ಜಾತಿ ವರ್ಗಗಳ ಅಭಿವೃದ್ಧಿ ನಿಗಮದ ವೈಯಕ್ತಿಕ ಕೊಳವೆ ಬಾವಿ (ಗಂಗಾ ಕಲ್ಯಾಣ) ಯೋಜನೆ ಅಡಿಯಲ್ಲಿ ಕಳೆದ ಎರಡು ವರ್ಷಗಳಲ್ಲಿ ಕೊರೆಯಲಾದ ಕೊಳವೆಬಾವಿಗಳ ಸಂಖ್ಯೆ ಎಷ್ಟು; (ಆರ್ಥಿಕ, ಭೌತಿಕ ವಿವರ ನೀಡುವುದು)

ಆ) ಸದರಿ ಯೋಜನೆಯು ಪರಿಶಿಷ್ಟರಿಗೆ ಮುಟ್ಟುವಲ್ಲಿ ವಿಫಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಸರ್ಕಾರದವರು ಕ್ರಮಕ್ಕೆಗೊಳ್ಳುವರೇ?

ಶ್ರೀ ಕೆ.ಎಂ. ಕೃಷ್ಣಾರೆಡ್ಡಿ (ಸಮಾಜ ಕಲ್ಯಾಣ ಸಚಿವರು) :—

ಅ) ಕಳೆದ ಎರಡು ವರ್ಷಗಳಲ್ಲಿ ವೈಯಕ್ತಿಕ ಹಾಗೂ ಗಂಗಾ ಕಲ್ಯಾಣ ಕೊಳವೆಬಾವಿ ಯೋಜನೆಯಡಿ ಯಾವುದೇ ಕೊಳವೆಬಾವಿಗಳನ್ನು ಕೊರೆದಿರುವುದಿಲ್ಲ.

ಆ) ಇಲ್ಲ

ಇ) ಗುಳೇದಗುಡ್ಡ ಮತಕ್ಷೇತ್ರವು ತಾಂತ್ರಿಕವಾಗಿ ಕೊಳವೆಬಾವಿ ಕೊರೆಯಲು ಅತ್ಯಂತ ಕಠಿಣ ಪ್ರದೇಶವಾಗಿರುವ ಕಾರಣ, ಕೊಳವೆಬಾವಿ ಕೊರೆಯುವ ಸಂಸ್ಥೆಗಳು ನೀರಿಲ್ಲದಿದ್ದರೆ ಹಣವಿಲ್ಲ. ಎಂಬ ನಿಬಂಧನೆ ಮೇರೆಗೆ ಕೊಳವೆ ಬಾವಿ ಕೊರೆಯಲು ಮುಂದೆ ಬರುತ್ತಿಲ್ಲ. ಇದರಿಂದಾಗಿ ಈ ಸ್ಥಳದಲ್ಲಿ ಗಂಗಾ ಕಲ್ಯಾಣ ಯೋಜನೆಯು ಇದುವರೆವಿಗೂ ಪ್ರಾರಂಭವಾಗಲಿಲ್ಲ. ಆದಾಗ್ಯೂ ಇಂತಹ ಕಠಿಣ ಪ್ರದೇಶದಲ್ಲಿ ಕೆಲಸ ನಿರ್ವಹಿಸುವ ಸಾಮರ್ಥ್ಯದ ರಿಗ್ ಗಳನ್ನು ಹೊಂದಿರುವ ಸಂಸ್ಥೆಗಳನ್ನು ಗುರ್ತಿಸಿ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

ಗುಳೇದಗುಡ್ಡ ವಿಧಾನಸಭಾ ಕ್ಷೇತ್ರದಲ್ಲಿ ಭೂ ಒಡೆತನ ಯೋಜನೆ.

96(367) ಶ್ರೀ ರಾಜಶೇಖರ ಶೀಲವಂತ ವೀರಣ್ಣ (ಗುಳೇದಗುಡ್ಡ) :— ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಳೇದಗುಡ್ಡ ಮತಕ್ಷೇತ್ರದ ಕೆಲೂರ ಗ್ರಾಮದಲ್ಲಿ ಪರಿಶಿಷ್ಟ ಜಾತಿ ವರ್ಗಗಳ ಅಭಿವೃದ್ಧಿ ನಿಗಮದ ಭೂ ಒಡೆತನ ಯೋಜನೆ ಅಡಿಯಲ್ಲಿ 7 ಎಕರೆ ಜಮೀನು ಖರೀದಿ ಪ್ರಕರಣ ಒಂದು ವರ್ಷದಿಂದ ನೆನೆಗುದಿಗೆ ಬಿದ್ದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದರೆ ಈ ಯೋಜನೆಗೆ ನೆನೆಗುದಿಗೆ ಬೀಳಲು ಕಾರಣಗಳೇನು?

ಇ) ಸದರಿ ಯೋಜನೆ ತೀವ್ರಗೊಳಿಸಲು ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಕೆ.ಎಂ. ಕೃಷ್ಣಾರೆಡ್ಡಿ (ಸಮಾಜ ಕಲ್ಯಾಣ ಸಚಿವರು) :—

ಅ) ಕೆಲೂರ ಗ್ರಾಮದ ಏಳು ಎತರೆ ಜಮೀನನ್ನು ಎಕರೆಗೆ ತಲಾ ರೂ.18,000-00 ರಂತೆ ಖರೀದಿಸಿ ಫಲಾನುಭವಿಗೆ ಹಂಚಲು ಮಂಜೂರಾತಿ ನೀಡಲಾಗಿದೆ. ಮಾರ್ಚ್ 99ರೊಳಗೆ ಸದರಿ ಜಮೀನನ್ನು ಫಲಾನುಭವಿಗಳ ಹೆಸರಿಗೆ ನೋಂದಣಿ ಮಾಡಿಸಿ ಕೊಡಲಾಗುವುದು.